ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
ಸಿಸಿ.ನಂ.471/2018

| | | | |
|---|---|---|---|
| ಸಾಕ್ಷಿಯ ಹೆಸರುಃ | ಶ್ರೀನಿವಾಸ್ | ಚಾಸಾ | ಃ2 |
| ತಂದೆಯ ಹೆಸರುಃ | ರಾಮಣ್ಣ | ಪ್ರಾಸಾಃ | 2 |
| ವಯಸ್ಸುಃ | 22 ವರ್ಷ | | |
| ಉದ್ಯೋಗಃ | ಡ್ರೈವರ್ | | |
| ವಾಸಃ | ಬಾಳಗಡಿ | | |

ದಿನಾಂಕಃ 02/04/2019 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 1 ರವರು ನನ್ನ ಸ್ನೇಹಿತರಾಗಿದ್ದು ನನ್ನ ಚಿಕ್ಕವಯಸ್ಸಿಂದಲೂ ಪರಿಚಯವಿರುತ್ತಾರೆ ನನ್ನ ಮತ್ತು ಚಾಸಾ 1 ರವರ ಮನೆ ಸ್ವಲ್ಪ ಅಕ್ಕಪಕ್ಕದಲ್ಲಿ ಇರುತ್ತದೆ. ಚಾಸಾ 1 ರವರು ವಾಟರ್ ಮ್ಯಾನ್ ಆಗಿ ಕೆಲಸ ಮಾಡುತ್ತಾರೆ. ಅವರು ಕೆಲಸ ಮಾಡಲು ಒಂದು ಬೈಕನ್ನು ಇಟ್ಟುಕೊಂಡಿದ್ದು ಅದರ ನಂಬರ್ ಕೆಎ-18/ಇಸಿ-2654 ಅಗಿರುತ್ತದೆ.ಅವರು ಅವರ ಬೈಕನ್ನು ಅವರ ಮನೆಯ ಶೆಡ್ ನಲ್ಲಿ ನಿಲ್ಲಿಸುತ್ತಿದ್ದರು.

ನನಗೆ ದಿನಾಂಕ 04/01/2018 ರಂದು ಚಾಸಾ 1 ರವರು ಅವರ ಬೈಕ್ ಕಳ್ಳತನವಾಗಿರುತ್ತದೆ ಎಂದು ನನಗೆ ಫೋನ್ ಮಾಡಿ ತಿಳಿಸಿದ್ದು ಅವರು ಹಿಂದಿನ ದಿನ ಅಂದರೆ ದಿನಾಂಕ 03/01/2018 ರಂದು ಬೈಕ್ ಕಳ್ಳತನವಾಗಿರುತ್ತದೆ ಎಂದು ಹೇಳಿರುತ್ತಾರೆ. ಬೈಕ್ ಕಳ್ಳತನವಾದ ವಿಚಾರವನ್ನು ಅವರು ಅವರ ಸ್ನೇಹಿತರು ಮತ್ತು ಸಂಬಂದಿಕರಿಗೆಲ್ಲಾ ತಿಳಿಸಿದ್ದು ನಾನು ಮತ್ತು ಅವರೂ ಸಹ ಬೈಕನ್ನು ಹುಡುಕಲು ಪ್ರಯತ್ನ ಪಟ್ಟಿರುತ್ತೇವೆ. ಎಷ್ಟು ಹುಡುಕಿದರೂ ಬೈಕ್ ಸಿಗಲಿಲ್ಲ ,ಹಾಗಾಗಿ ನಂತರದಲ್ಲಿ ಚಾಸಾ 1 ರವರು ಬೈಕನ್ನು ಹುಡುಕಿಕೊಡುವಂತೆ ದೂರನ್ನು ನೀಡಿರುತ್ತಾರೆ.

ನಂತರ ದಿನಾಂಕ 29/01/2018 ರಂದು ಬೈಕನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಶರತ್ ಭಟ್ಟ ಕಳ್ಳತನ ಮಾಡಿರುತ್ತಾನೆ ಎಂದು ಆ ದಿನ ಆತನನ್ನು ಶೆಡ್ ಬಳಿ ಕರೆದುಕೊಂಡು ಬಂದಾಗ ತಿಳಿದುಬಂದಿರುತ್ತದೆ. ಆ ದಿನ ಅಲ್ಲಿಗೆ ಬಂದಿದ್ದ ಆರೋಪಿ ಬೈಕನ್ನು ಇಲ್ಲಿಂದಲೇ ಕಳ್ಳತನ ಮಾಡಿಕೊಂಡು ಹೋಗಿರುತ್ತೇನೆ ಎಂದು ಹೇಳಿರುತ್ತಾನೆ. ಸದರಿ ಸಮಯದಲ್ಲಿ ಪೋಲಿಸರು ನನ್ನ ಹಾಗು ಚಾಸ 5 ರವರ ಸಮಕ್ಷಮದಲ್ಲಿ ಮಹಜರನ್ನು ಮಾಡಿ ನನ್ನಸಹಿ ಪಡೆದಿರುತ್ತಾರೆ. ಸದರಿ ಮಹಜರನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಪೋಲಿಸರು ಫೋಟೊವನ್ನಾ ಸಹ ತೆಗೆದಿದ್ದು ಫೋಟೋವನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ. ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದೆ. ಈ ಬಗ್ಗೆ ಪೋಲಿಸರು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ . ಬಿವಿಜಿ.,        ವಕೀಲರಿಂದಃ</u>**

ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ದಿನಾಂಕಃ02/04/2019 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-xxx
(ಕೆ.ಎಂ.ಗೌತಮ್)
ಪ್ರ.ದ.ನ್ಯಾ.ದಂಃಕೊಪ್ಪ

ಸಹಿ/-xxx
ಸಾಕ್ಷಿಯ ಸಹಿಃ